ದಿನಾಂಕಃ **09.01.2026.**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ **2, 5, 6** ಮತ್ತು **8** ನೇ ಪ್ರತಿವಾದಿ ಪರ ಶ್ರೀ ಡಿ.ಎಸ್.ಆರ್. ವಕೀಲರಿಂದಃ

ಬಂಟವಾಳ ಗ್ರಾಮದ ಸರ್ವೆ ನಂ. 17/3 ರಲ್ಲಿ 30 ಗುಂಟೆ ಜಮೀನು ಯಾರಿಗೆ ಸೇರಿರುತ್ತದೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನ್ನ ತಾತ ದೊಡ್ಡಈರಲಿಂಗಪ್ಪನವರಿಗೆ ಸೇರಿದಂತಹ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸದರಿ ಸ್ವತ್ತಿನ ಖಾತೆ ಪ್ರಸ್ತುತ ನನ್ನ ತಂದೆಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸದರಿ ಸ್ವತ್ತನ್ನು ಈ ದಾವೆಯಲ್ಲಿ ದಾವಾ ಸ್ವತ್ತಾಗಿ ಸೇರಿಸಿರುವುದಿಲ್ಲ. ಚಿನಕವಜ್ರ ಗ್ರಾಮದ ಸರ್ವೆ ನಂ. 17/5 ಎಇ ರಲ್ಲಿ 36 ಗುಂಟೆ ಮತ್ತು ಸರ್ವೆ ನಂ.17/5 ಎ2 ರಲ್ಲಿ 18 ಗುಂಟೆ ಜಮೀನಿನ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಚಿನಕವಜ್ರ ಗ್ರಾಮದ ಸರ್ವೆ ನಂ. 182/2 ರಲ್ಲಿ 16 ಗುಂಟೆ ಜಮೀನಿನ ಖಾತೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಸ್ವತ್ತುಗಳ ಖಾತೆ ಪವತಿ ವಾರಸು ರೂಪದಲ್ಲಿ ನನ್ನ ಹೆಸರಿಗೆ ವರ್ಗಾವಣೆಯಾಗಿರುತ್ತವೆ ಎಂದರೆ ಸರಿ . ಈ ಮೇಲೆ ಹೇಳಿದ ಚಿನಕವಜ್ರ ಗ್ರಾಮದ 3 ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

2. ಚಿನಕವಜ್ರ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ 2 ಮನೆಗಳಿರುತ್ತವೆ ಎಂದರೆ ಸರಿ. 2 ನೇ ವಾದಿಯ ಹೆಸರಿನಲ್ಲಿ ಬೆಂಗಳೂರಿನಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ.

3. ನನ್ನ ತಾತ ದೊಡ್ಡಈರಲಿಂಗಪ್ಪನವರ ತಂದೆಯ ಹೆಸರು ರಂಟವಾಳಪ್ಪ. ಸದರಿ ರಂಟವಾಳಪ್ಪನಿಗೆ 5 ಜನ ಮಕ್ಕಳು ಎಂದರೆ ಸರಿ. ಸದರಿ 5 ಜನರಲ್ಲಿ ನನಗೆ ದೊಡ್ಡಈರಲಿಂಗಪ್ಪ, ಕರೆಲಿಂಗಪ್ಪ ರವರು ಮಾತ್ರ ಗೊತ್ತಿರುತ್ತದೆ ಉಳಿದವರ ಹೆಸರು ಗೊತ್ತಿರುವುದಿಲ್ಲ ನನ್ನ ತಾತ ದೊಡ್ಡಈರಲಿಂಗಪ್ಪನಿಗೆ ಒಟ್ಟು 6 ಜನ ಮಕ್ಕಳು.

4. ನನ್ನ ತಾತ ಕರೆಲಿಂಗಪ್ಪರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಕರೆಲಿಂಗಪ್ಪನ ಹೆಂಡತಿಯ ಅಕ್ಕನ ಮಗಳಾದ ಕಾವಲಮ್ಮ ರವರನ್ನು ಸಾಕಿಕೊಂಡಿದ್ದರು ಎಂದು ಉತ್ತರಿಸಿರುತ್ತಾರೆ. ಕರೆಲಿಂಗಪ್ಪ ನಿಮ್ಮ ತಂದೆಯನ್ನು ದತ್ತು ಪಡೆದುಕೊಂಡಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ ಎಂದು ಉತ್ತರಿಸಿರುತ್ತಾರೆ. ಕರಿಲಿಂಗಪ್ಪನಿಗೆ ಸೇರಿದ ಆಸ್ತಿಗಳನ್ನು ನನ್ನ ತಂದೆ ಅನುಭವಿಸುತ್ತಿದ್ದರು ಎಂದರೆ ಸರಿ.

5. ದೊಡ್ಡಈರಲಿಂಗಪ್ಪ ನ ಮಕ್ಕಳು ದಾವಾ -2 ರಿಂದ 4 ನೇ ಸ್ವತ್ತುಗಳಿಗೆ ದಿನಾಂಕ 18.01.1971 ರಂದು ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿಭಾಗದಂತೆ ಖಾತೆ ಪಹಣಿ ಮಾಡಿಸಿಕೊಂಡು ದೊಡ್ಡಈರಲಿಂಗಪ್ಪನ ಮಕ್ಕಳು ದಾವಾ 2 ರಿಂದ 4 ನೇ ಸ್ವತ್ತುಗಳನ್ನು ಅನುಭವಿಸುತ್ತಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಪಾರಿಕತ್ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಅನುಭವಿಸುತ್ತಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗದಲ್ಲಿ ಸರ್ವೆ ನಂ. 17/3 ರಲ್ಲಿ 30 ಗುಂಟೆ ಜಮೀನನ್ನು ನ ನ್ನ ತಂದೆಯ ಪಾಲಿಗೆ ನೀಡಿರುತ್ತಾರೆ ಎಂದರೆ ಸರಿ.

6. 1971 ರಲ್ಲಿ ವಿಭಾಗವಾದ ನಂತರ ದಾವಾ 1 ನೇ ಸ್ವತ್ತು 5 ಮತ್ತು 6 ನೇ ಪ್ರತಿವಾದಿ ತಂದೆ ಮಡಿವಾಳಪ್ಪನವರಿಗೆ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 6 ನೇ ಸ್ವತ್ತು ಆಶ್ರಯ ಯೋಜನೆಯಡಿಯಲ್ಲಿ ಮಡಿವಾಳಪ್ಪನವರಿಗೆ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ 5 ನೇ ಸ್ವತ್ತು 8 ನೇ ಪ್ರತಿವಾದಿಗೆ ದೇವರಾಜು ಅರಸು ವಸತಿ ಯೋಜನೆಯಡಿಯಲ್ಲಿ ಮಂಜೂರಾಗಿತ್ತದೆ ಎಂದರೆ ನನಗೆ ಗೊತ್ತಿಲ್ಲ.

7. ಮಡಿವಾಳಪ್ಪ ತೀರಿಕೊಂಡ ನಂತರ ಅವರಿಗೆ ಸೇರಿದ ಆಸ್ತಿಗಳ ಖಾತೆ ಪವತಿ ವಾರಸು ಮೇರೆಗೆ ವರ್ಗಾಣೆ ಮಾಡುವಂತೆ 5 ಮತ್ತು 6 ನೇ ಪ್ರತಿವಾದಿಗಳ ತಾಯಿ ನಿರ್ಮಲ ರವರು ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ಅರ್ಜಿಗೆ ನಿಮ್ಮ ತಂದೆ ತಕರಾರು ಸಲ್ಲಿಸಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವಿಚಾರವಾಗಿ ತಹಶೀಲ್ದಾರ್ ರವರು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು, ನನ್ನ ತಂದೆ, ನಿರ್ಮಲ ಮತ್ತು ಈರಪ್ಪ ರಾಜಿ ಮಾಡಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಪ್ರಕರಣದಲ್ಲಿ ರಾಜಿ ಮಾಡಿಕೊಂಡು ನಾನು, ನನ್ನ ತಂದೆ, ನಿರ್ಮಲ ಮತ್ತು ಈರಪ್ಪ ತಹಶೀಲ್ದಾರ್ ರವರ ಸಮಕ್ಷಮ ಸಹಿ ಮಾಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

8. 1971 ರಲ್ಲಿಯೇ ಕುಟುಂಬದಲ್ಲಿ ವಿಭಾಗ ಮಾಡಿಕೊಂಡಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರತಿವಾದಿಗಳ ಪಾಲಿಗೆ ಹೋದಂತ ಆಸ್ತಿಗಳಿಗೆ ಸಂಬಂಧಿಸಿದಂತೆ ಪುನಃ ಈ ದಾವೆಯನ್ನು ಹೂಡಿರುತ್ತೀರಾ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ವಿಭಾಗ ಮಾಡಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ . ದಾವಾ

ಸ್ವತ್ತುಗಳಲ್ಲಿ ನನ್ನ ತಂದೆಗೆ ಮತ್ತು ನನಗೆ ಯಾವುದೇ ಪಾಲು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನಾಗಲೀ, ನನ್ನ ತಂದೆ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಾಗಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ .